ಸೂರ್ಯ ಹಿಂದಿನ ದಿನ ರಾತ್ರಿ ಅಮೆರಿಕಾದಿಂದ ಬಂದಿದ್ದ. ಮರುದಿನ ಶನಿವಾರ. ಅವನು ಸೋಮವಾರ ಕೆಲಸಕ್ಕೆ ಹಾಜರಾಗಲೇಬೇಕಾಗಿತ್ತು. ಸೂರ್ಯ ತಿಂಡಿತಿಂದು ಕಾರ್ ತೆಗೆದುಕೊಂಡು ಹೊರಟ. ಮಗನ ಕಾಯಿಲೆ ವಿಚಾರ ತಿಳಿದು ತಂದೆತಾಯಿ ಹೇಗಿರವರೋ? ಗಂಡನನ್ನು ಹುಚ್ಚಳಂತೆ ಪ್ರೀತಿಸುವ ಶಿವಾನಿಗೆ ಅದೆಂತಹ ಆಘಾತವಾಗಿರಬಹುದು. ಅವರನ್ನೆಲ್ಲಾ ಹೇಗೆ ಎದುರಿಸುವುದು? ಸುಮೇರುಗೆ ಹೇಗೆ ಸಮಾಧಾನ ಹೇಳುವುದು? ಅವನ ತಲೆ ಯೋಚನೆಗಳ ಕಾರ್ಖಾನೆಯಾಗಿತ್ತು.

ಸೂರ್ಯನನ್ನು ನೋಡಿದೊಡನೆ ಸುಮೇರುವಿನ ತಾಯಿ ಅವನನ್ನು ಹಿಡಿದುಕೊಂಡು ಅತ್ತರು.

"ನಮ್ಮ ಸುಮೇರು ಏನು ತಪ್ಪು ಮಾಡಿದ್ದಾನೇಂತ ದೇವರು ಈ ತರಹ ಶಿಕ್ಷೆ ಕೊಟ್ಟ ಸೂರ್ಯ? ಅವನಿಲ್ಲದೆ ನಾವು ಹೇಗೋ ಬದುಕೋದು?"

ಸೂರ್ಯ ಏನು ಹೇಳಲು ಸಾಧ್ಯ? ಅವರನ್ನು ಸಂತೈಸಿ ಒಳನಡೆದ ಸುಮೇರು ಅಂಗಾತ ಮಲಗಿ ತಿರುಗುತ್ತಿದ್ದ ಫ್ಯಾನ್ ನೋಡುತ್ತಿದ್ದ. ಕ್ಯಾನ್ಸರ್ ಅವನ ರಕ್ತಹೀರಿ ಬರಿಯ ಮೂಳೆಚಕ್ಕಳ ಉಳಿಸಿತ್ತು. ಅವನು ಸೊರಗಿ ಸೊರಗಿ ಕುಗ್ಗಿದಂತೆ ಕಾಣುತ್ತಿದ್ದ ಕಣ್ಣುಗಳಲ್ಲಿ ಕಾಂತಿಯೇ ಇರಲಿಲ್ಲ. ಕಣ್ಣುಗಳ ಸುತ್ತ ಕಪ್ಪು ಕವಿದಿತ್ತು. ಕೈಗಳಲ್ಲಿ ನರಗಳು ಎದ್ದು ಕಾಣುತ್ತಿದ್ದವು.

"ಸೂರ್ಯ ಒಂದು ಕೋರಿಕೆ" ಬಾಲು ಪಿಸುಗುಟ್ಟಿದ.

"ನೀನು ಶಿವಾನಿ ಬಗ್ಗೆ ಅವನನ್ನು ಏನೂ ಕೇಳಬೇಡ. ಅವನು ತುಂಬಾ ನೊಂದುಕೊಳ್ತಾನೆ."

"ಶಿವಾನಿ ಈ ಮನೆಯಲ್ಲಿಲ್ವಾ?"

"ಇಲ್ಲ ಅಷ್ಟು ಮಾತ್ರ ನಾನು ಹೇಳಬಲ್ಲೆ... ಪ್ಲೀಸ್ ನನ್ನ ಮಾತು ನೆನಪಿನಲ್ಲಿಟ್ಟುಕೋ."

ಸೂರ್ಯ ಮಂಚದ ಮೇಲೆ ಕುಳಿತು ಮೆಲುವಾಗಿ ಸುಮೇರು ಎಂದು ಕೂಗಿದ. ಅವನ ಕಡೆ ತಿರುಗಿದ ಸುಮೇರುವಿನ ಕಣ್ಣುಗಳಲ್ಲಿ ನೀರು ಚಿಮ್ಮಿತು. 'ಸೂರ್ಯ' ಎಂದ.

ಹತ್ತಿಯಂತಿದ್ದ ಅವನ ಕೈ ಹಿಡಿದು ಸೂರ್ಯ ಕೇಳಿದ: "ಇದೇನೋ ನಿನ್ನ ಅವಸ್ಥೆ?"

ಅವನು ಗೆಳೆಯನ ಕುತ್ತಿಗೆಗೆ ಜೋತುಬಿದ್ದು ಹೇಳಿದ: "ಸೂರ್ಯ ನನಗೆ ನಿಮ್ಮನ್ನೆಲ್ಲಾ ಬಿಟ್ಟು ಇಷ್ಟು ಬೇಗ ಸಾಯಲು ಇಷ್ಟವಿಲ್ಲ ಕಣೋ ಪ್ಲೀಸ್ ನನ್ನ ಬದುಕಿಸೋ..."

ಸೂರ್ಯನಿಗೆ ಗೆಳೆಯನ ಸ್ಥಿತಿನೋಡಿ ಕರುಳುಕಿತ್ತು ಬಂದಂತಾಯ್ತು.

"ನಾನೇನು ಮಾಡಲೋ ಸುಮೇರ್? ನನ್ನ ಆಯಸ್ಸು ಕೊಡುವಂತಿದ್ದರೆ ಕೊಡ್ತಿದ್ದೆ ಕಣೋ..." ಅವನ ಮನಸ್ಸು ನುಡಿಯಿತು. ಸುಮೇರು ಅವನ ಉತ್ತರಕ್ಕೆ ಕಾಯದೆ ಹೇಳಿದ–"ನಾನು ಶಿವಾನಿ ಒಂದು ತಿಂಗಳು ಎಷ್ಟು ಚೆನ್ನಾಗಿದ್ದೆವು ಗೊತ್ತಾ? ದೇವರಿಗೇ ನಮ್ಮ ಜೋಡಿ ನೋಡಿ ಹೊಟ್ಟೆಕಿಚ್ಚಾಯ್ತುಂತ ಕಾಣುತ್ತೆ. ಒಂದು ದಿನ ಕಾಲೇಜ್‌ಗೆ ಹೊರಟಿದ್ದವನು ತಲೆತಿರುಗಿ ಬಿದ್ದೆ. ತಕ್ಷಣ ಆಸ್ಪತ್ರೆಗೆ ಸೇರಿಸಿ, ಎಲ್ಲಾ ಚೆಕಪ್ ಮಾಡಿಸಿದರು. ನನಗೆ ಬ್ಲಡ್ ಕ್ಯಾನ್ಸರ್ ಎಂದರು. ನನಗೆ ಈ ವಿಚಾರ ಮೊದಲೇ ಗೊತ್ತಿದಿದ್ರೆ ಖಂಡಿತಾ ನಾನು ಶಿವಾನೀನ್ನ ಮದುವೆ ಆಗ್ತಿರಲಿಲ್ಲ ಕಣೋ. ಅವಳು ನನ್ನನ್ನು ಹುಚ್ಚಳಂತೆ ಪ್ರೀತಿಸ್ತಾಳೆ. ನಾನು ಹೆಚ್ಚೆಂದ್ರೆ ಒಂದು ತಿಂಗಳು ಬದುಕಿರಬಹುದು. ಆಮೇಲೆ ಶಿವಾನಿ ಗತಿಯೇನೋ?"

"ನೀನೀಗ ಅವಳ ಬಗ್ಗೆ ಯೋಚಿಸಬೇಡ. ನಾವು ಅಮೆರಿಕಾಕ್ಕೆ ಹೋಗೋಣ. ಅಲ್ಲಿ ನೀನು ಟ್ರೀಟ್ಮೆಂಟ್ ತೊಗೋ..."

"ನಮ್ಮ ಡಾಕ್ಟರ್ ನನ್ನ ರಿಪೋರ್ಟ್‌ಗಳನ್ನು ಅಮೆರಿಕಾದ ಅವರ ಫ್ರೆಂಡ್‌ಗೆ ಕಳಿಸಿದ್ದರು.